ನನ್ನ ಪುಟ್ಟಕಂದನಿಗೆ ಆಗ ಮೂರು ವರುಷವೂ ತುಂಬಿರಲಿಲ್ಲ. ನನ್ನ ಗೆಳತಿ ಒಂದು ಶಾಲೆಯ ಮುಖ್ಯೋಪಾಧ್ಯಾಯಿನಿ. ಆಕೆ ಒತ್ತಾಯ ಮಾಡಿ, ನನ್ನ ಪುಟಾಣಿ, ಅವರ ಶಾಲೆಯಲ್ಲಿ, ಎಲ್.ಕೆ.ಜಿಗೆ ದಾಖಲಾಗುವಂತೆ, ಮಾಡೇಬಿಟ್ಟರು. ಒಂದು ಸಲ ಶಾಲೆಯ ಸಂಸ್ಥಾಪಕರನ್ನು, ಮಗುವಿನೊಡನೆ ಭೇಟಿಯಾಗುವ ಶಾಸ್ತ್ರ ಪೂರೈಸಬೇಕಿತ್ತು. ನಿಗದಿತ ಆ ದಿನ, ನಾನು ನನ್ನ ಮಗಳೊಡನೆ ಹೋದೆ. ಹಿರೀಪ್ರಾಯದ ಆ ಕಾರ್ಯದರ್ಶಿಯ ಎದುರು ನಾನು, ನಮಸ್ಕಾರ ಹೇಳಿ, ಕೂತೆ. ಮಗುವನ್ನು ಪರಿಚಯಿಸುವ ಅಪೇಕ್ಷೆಯಿಂದ, ಸುತ್ತಲೂ ಕಣ್ಣಾಡಿಸಿದೆ. ಕಾಣುತ್ತಲೇ ಇಲ್ಲ. ಒಂದು ಕ್ಷಣ ಗಾಬರಿಗೊಂಡೆ. ನನ್ನ ಹಾಗು ಕಾರ್ಯದರ್ಶಿಗಳ ನಡುವೆ ಒಂದು ಮೇಜಿತ್ತಲ್ಲ. ಅದರ ಕೆಳಗೆ, ಮಗು ಅವಿತು ಕೂತಿದ್ದು, ಅದು ಆ ಕಾರ್ಯದರ್ಶಿಗಳ ಗಮನಕ್ಕೆ ಬಂತು. ನಮ್ಮ ಪಾಪು, ಅವರ ಕಾಲು ಹಿಡಿದಿತ್ತು. ಅವರೋ ಸಂಕೋಚದಿಂದ, 'ಏನು ಮರಿ, ನನ್ನ ಕಾಲು ಬಿಡು. ನೀನೇ, ದೇವರು.' ಮಗುವಿಗೆ ಎಳವೆಯಿಂದಲೂ, ದೊಡ್ಡವರನ್ನು ಕಂಡರೆ ನಮಸ್ಕಾರ ಮಾಡಬೇಕು ಎಂದು ಹೇಳಿಕೊಟ್ಟಿದ್ದು, ನೆನಪಿಗೆ ಬಂತು. ಹೀಗಾಗಿ ಅವಳು ಆ ದಿನ, ಆ ಮಾತಿನ ಅನುಸಾರ, ಬಾಗಿ ಅವರಿಗೆ ಪ್ರಣಾಮ ಮಾಡಿದ್ದಳು. ಆತ ಬಗ್ಗಿ, ಮಗುವನ್ನು ಎತ್ತಿಕೊಂಡು, ಪ್ರೀತಿಯಿಂದ ನೇವರಿಸಿ, ಹೇಳಿದರು, 'ನಿನಗೆ ಸೀಟು, ಕೊಟ್ಟಿದೀನಿ ಕಂದ, ಖುಷೀನಾ'. ಏಳಲು ಒಲ್ಲದೆ, ಕನಸು ಕಾಣುತ್ತ ಪವಡಿಸುವ ಆ ಕೂಸು, ಕಣ್ಣುಜ್ಜಿಕೊಳ್ಳುತ್ತ ಎದ್ದು, 'ಹೋಗೆನು ನಾನು ಶಾಲೆಗೆ' ಎಂದು ಹಟ ಹಿಡಿಯುವ ಗಳಿಗೆ, ಆರಂಭವಾಯಿತು. ನಮ್ಮ ಆಕಾಶವಾಣಿಯ ಮಕ್ಕಳ ವಿಭಾಗದ ಕಾರ್ಯಕ್ರಮ ನಿರ್ವಾಹಕಿಯಾಗಿದ್ದೇ ಅಲ್ಲದೆ, ಮಕ್ಕಳ ಸಾಹಿತಿಯಾಗಿ ನಾನು ಪ್ರಕಟಗೊಳ್ಳಲು, 'ಹೋಗುವೆ ನಾನು ಶಾಲೆಗೆ' ಈ ಗೀತರೂಪಕದ ರಚನೆಗೆ, ಪ್ರೇರಕವಾಯಿತು. ಇದರಲ್ಲಿ ಅಮ್ಮ, ಮಗು ಶಾಲೆಗೆ ಹೋಗುವ ಸಾಧಕಬಾಧಕಗಳ ಬಗ್ಗೆ, ಮಾತಲ್ಲಿ, ಗೀತೆಯಲ್ಲಿ ಸಂಭಾಷಿಸುತ್ತಾರೆ. ಶಾಲೆಗೆ ಹೋಗುವುದೇ ಇಲ್ಲವೆಂದು ಹಟ ಹಿಡಿದ ಮಗು, ನಗುನಗುತ್ತ ಬ್ಯಾಗೇರಿಸಿ, ಶಾಲೆಗೆ ಹೊರಡುತ್ತದೆ. ಅದರ ಒಂದು ಸಣ್ಣ ತುಣುಕು ಹೀಗಿದೆ. ಮಗು ಏಳಲು ತಕರಾರು ಹೂಡಿದಾಗ, ತಾಯಿ, ಪ್ರಕೃತಿಯಲ್ಲಿರುವ ಮರ, ಗಿಡ, ಕೋಗಿಲೆ ಇವುಗಳನ್ನು ತೋರಿ ಹಾಡುತ್ತಾಳೆ. 'ಮಾಮರದಲ್ಲಿದೆ ಕೋಗಿಲೆ, ಎದ್ದಿದೆ ನೋಡದು ಕೂಗಲೇ, ಮರಿಗಳನ್ನೆಬ್ಬಿಸಿ ಕೂಗಿತು ಕುಹು ಕುಹು' ಜಾಣಮಗು, ಅಮ್ಮನಿಗೆ ಪ್ರಶ್ನೆ ಮಾಡುತ್ತದೆ 'ಕೋಗಿಲೆಗೆಲ್ಲಿದೆ ಶಾಲೆ, ನಾನೀಗೇಳಲು ಒಲ್ಲೆ, ಸಕ್ಕರೆ ಸವಿಯ ನಿದ್ದೆಯ ಬಲ್ಲೆ, ನಾನೀಗೇಳಲು ಒಲ್ಲೆ' ಮಗು ಮುಂದುವರೆಸುತ್ತದೆ, 'ಸ್ಕೂಲು ಬೇಡಮ್ಮ, ಅಮ್ಮ ಸ್ಕೂಲು ಬೇಡಮ್ಮ, ಚೆಲುವಿನ ಅಮ್ಮ, ಒಲವಿನ ಅಮ್ಮ, ಮುದ್ದಿನ ಅಮ್ಮ, ದಯೆ ತೋರಮ್ಮ, ಹೋಗೆನು ನಾನು ಶಾಲೆಗೆ, ಹೋಗೆನು ಶಾಲೆಗೆ ಹೋಗೆನು, ಹೋಗೆನು ಹೋಗೆನು ಹೋಗೆನು, ಹೋಗೋಲ್ಲಾಂದ್ರೆ ಹೋಗೋಲ್ಲ, ಏನು ಮಾಡಿದರೂ ಹೋಗೋಲ್ಲ, ಬೈದರೂ ಹೋಗೋಲ್ಲ, ಮುದ್ದಿಸಿದರೂ ಹೋಗೋಲ್ಲ, ಬಿಲಕುಲ್ ಹೋಗೋಲ್ಲ'. ಇದು ನನ್ನ ಹಾಗು ನನ್ನ ಮಗುವಿನ ಕತೆ. ಅನುಭವಜನ್ಯ ಗೀತರೂಪಕ. ಆಕಾಶವಾಣಿಯ ಸಂಗೀತಮಯ ಕಾರ್ಯಕ್ರಮವಾಗಿ, ಜಯಭೇರಿ ಬಾರಿಸಿತು. ಮುಂದೆ ಪುಸ್ತಕ ರೂಪ ತಾಳಿದ 'ಹೋಗುವೆ ನಾನು ಶಾಲೆಗೆ', ಕವಿ ಜಿ.ಎಸ್. ಶಿವರುದ್ರಪ್ಪ ಅವರಿಂದ ಮೆಚ್ಚುಗೆಯ ಮುನ್ನುಡಿಯ ಬೆಚ್ಚನೆಯ ರಕ್ಷೆ ಪಡೆಯಿತು.

ಜೀವನದಲ್ಲಿ, ಇಂತಹ ಪರಿಸ್ಥಿತಿ ಗೆಲ್ಲುವುದು ಸುಲಭಸಾಧ್ಯವೇ? ಪಟ್ಟುಹಿಡಿದು ಶಾಲೆ ಸೇರುವಂತೆ ಮಾಡಿದ ಗೆಳತಿ, ಮಗುವನ್ನು ದಿನಾಲೂ ಶಾಲೆಗೆ ಕರೆದೊಯ್ಯುವ ಹೊಣೆಗಾರಿಕೆ ಹೊತ್ತುಕೊಂಡರು. ಆಕೆ, ಅವರ ಬೀದಿಯ ಮಕ್ಕಳನ್ನೆಲ್ಲ, ಮೈದುನನ ಸ್ಕೂಟರಲ್ಲಿ ಏರಿಸಿಕೊಂಡು ಬರುವರು. ನಮ್ಮನೆ ಮಗುವನ್ನು ಸ್ಥಳದ ಅಭಾವದಿಂದ, ತಮ್ಮ ತೊಡೆಯ ಮೇಲೆ,